ಗಮನದಲ್ಲಿಟ್ಟುಕೊಂಡು ಸರ್ಕಾರವು 1993-94ನೇ ಸಾಲಿನ ಆಯವ್ಯಯದಲ್ಲಿ ರೂ.3000-00 ಲಕ್ಷಗಳ ಸಹಾಯಧನವನ್ನು ಒದಗಿಸಿದೆ. ಈ ಹಣವನ್ನು ಚಾಲ್ತಿ ವರ್ಷದ ಎಂ.ಎಂ.ಆರ್. ಪ್ರಕಾರ ಮಂಗಳೂರು ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿನ ಸಹಾಯಧನ ಬಾಕಿಯಿರುವ ಕೈಗಾರಿಕೆಗಳಿಗೆ ಬಿಡುಗಡೆ ಮಾಡಲಾಗುವುದು.

12.45 ಪಿ. ಎಂ.

* ಶ್ರೀ ವಿಜಯಕುಮಾರ್ ಶೆಟ್ಟಿ : ಇದು ಅತ್ಯುತ್ತಮವಾದದ್ದು, ಆದರೆ ಮೊದಲು ನಾವು ಲೈಸನ್ಸ್ ಮತ್ತು ಪರ್ಮಿಟ್ ಎಲ್ಲದಕ್ಕೂ ಬೆಂಗಳೂರು, ಡೆಲ್ಲಿಯನ್ನು ಹೊಂದಿಕೊಂಡಿರ ಬೇಕಾಗಿತ್ತು. ಈ ಕೈಗಾರಿಕಾ ಕೇಂದ್ರದ ಕಲ್ಪನೆ ಸಾಗತಾರ್ಹವಾದದ್ದು. ಆದರೂ ಜನತಾ ಸರ್ಕಾರದ ಸಂದರ್ಭದಲ್ಲಿ 83 ರಿಂದ 89ರವರೆಗೆ ಯಾವುದೇ ಸಬ್ಸಿಡಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿರಲಿಲ್ಲ ಮತ್ತು ಈಗ ಸುಮಾರು 288 ಇಂಡಸ್ಟ್ರಿಯಲಿಸ್ಟ್ಸ್ ಗಳಿಗೆ 300 ಕೋಟಿಯಷ್ಟು ಸ್ಕ್ಯಾಂಕ್ಷನ್ ಆಗಲಿಕ್ಕೆ ಬಾಕಿ ಇದೆ ಮತ್ತು ಇದನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅದೇ ತರಹ ಡಿ.ಐ.ಸಿ.ಯವರು ಏನು ಮಾಡುತ್ತಾರೆಂದರೆ, ಕೆಎಸ್ಎಫ್ಸಿ ಅಥವಾ ಇನ್ನಿತರ ಫೈನಾನ್ಷಿಯಲ್ ಇನ್ಸ್ಟಿಟ್ಯೂಟ್ನಿಂದ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಈ ಕೆಎಸ್ಎಫ್ಸಿ, ಕೆಎಸ್ಐಡಿಸಿ, ಕೆಎಐಡಿಬಿ ಅವರಲ್ಲಿ ಅನ್ಯೋನ್ಯತೆ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಮೊನ್ನೆ ತಾನೆ ಬಜೆಟ್ನಲ್ಲಿ ನೂಡಲ್ ಏಜನ್ಸಿ ಮಾಡುತ್ತೇವೆಂದು ಹೇಳಿದ್ದಾರೆ. ನಿಜವಾಗಲೂ ಇದು ಸ್ವಾಗತಾರ್ಹವಾದದ್ದು. ಇಂಡಸ್ಟ್ರೀಸ್ನವರು ಬಹಳ ಕಾಲದಿಂದ ಈ ಬೇಡಿಕೆಯನ್ನು ಸಲ್ಲಿಸುತ್ತಿದ್ದಾರೆ. ಗುಜರಾತ್ನಲ್ಲಿ ಇದೇ ಪ್ರಕಾರ ಮಾಡಿರುವುದರಿಂದ, ಅಂದರೆ ಈ ಇಂಡಸ್ಟ್ರೀಯಲಿಸ್ಟ್ಗಳ ಬೇಡಿಕೆಯನ್ನು ಒಂದು ತಿಂಗಳೊಳಗೆ ಒದಗಿಸಿಕೊಡುತ್ತಾರೆ. ಆದರೆ ಇಲ್ಲಿ ಏನಾಗಿದೆ ಅಂದರೆ ಸುಮಾರು ಒಂದು ವರ್ಷಕ್ಕೂ ಮೇಲ್ಪಟ್ಟು ಒಂದು ಸಲ ಡಿಐಸಿಯವರು ಕೆಎಸ್ಎಫ್ಸಿಗೆ ಹೋಗಿ ಎಂದು ಹೇಳುತ್ತಾರೆ. ಮತ್ತೊಂದು ಸಲ ಕೆಎಸ್ಎಸ್ಐಡಿಸಿಗೆ ಹೋಗುವುದಕ್ಕೆ ಹೇಳುತ್ತಾರೆ. ಕೊನೆಯದಾಗಿ ಬ್ಯಾಂಕ್ನವರ ಹತ್ತಿರ ಹೋಗಲು ಹೇಳುತ್ತಾರೆ. ಈಗ ನ್ಯಾಷನಲೈಸ್ ಬ್ಯಾಂಕ್ ಯಾವ ರೀತಿ ಸಾಲ ವಿತರಣೆ ಮಾಡುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಆದುದರಿಂದ ಈ ನೂಡಲ್ ಏಜೆನ್ಸಿ ಮಾಡಬೇಕೆಂದಿರುವುದನ್ನು ಆದಷ್ಟು ತೀವ್ರಗತಿಯಲ್ಲಿ ನಮಗೆ ಒದಗಿಸಿಕೊಡಬೇಕು. ಮತ್ತೊಂದು ಬೇಡಿಕೆ ಬೈಕಂಪಾಡಿ ಇಂಡಸ್ಟ್ರಿಯಲ್ ಎಸ್ಟೇಟ್ ಬಹಳಷ್ಟು ಅಭಿವೃದ್ಧಿಯಾಗುತ್ತಿದೆ. ಮತ್ತು ಮಂಗಳೂರು ರಿಫೈನರಿ ಮತ್ತು ಜಯಪ್ರಕಾಶ್ ಸ್ಟೀಲ್ ಇಂಡಸ್ಟ್ರೀಸ್ಗಳಂತೆ ಹಲವಾರು ಇಂಡಸ್ಟ್ರೀಸ್ಗಳು ಬರುತ್ತಿವೆ. ಇದನ್ನು ಬೇಸಿಕ್ ಆಗಿ ಇಟ್ಟುಕೊಂಡು ಸುಮಾರು 114 ಸಬ್ಸಿಡರಿ ಇಂಡಸ್ಟ್ರೀಸ್ಗಳು ಬರುತ್ತಿವೆ. ಆದುದರಿಂದ ಈ ನೂಡಲ್ ಏಜನ್ಸಿಯನ್ನು ಮಂಗಳೂರು ಬೈಕಂಪಾಡಿ ಆ ಇಂಡಸ್ಟ್ರಿಯಲ್ ಎಸ್ಟೇಟ್ನಲ್ಲಿ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಬೈಕಂಪಾಡಿ ಇಂಡಸ್ಟ್ರಿಯಲ್ ಎಸ್ಟೇಟ್ನಲ್ಲಿ ಇನ್ನು 500 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಬರುವಂತಹ ಇಂಡಸ್ಟ್ರೀಸ್ನವರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು 1990 ರವರೆಗೆ ನಮ್ಮ ಕರ್ನಾಟಕ ರಾಜ್ಯ 4ನೇ ಸ್ಥಾನದಲ್ಲಿತ್ತು. ಈಗ 15ನೇ ಸ್ಥಾನಕ್ಕೆ ಇಳಿದಿದೆ. ಈ ತರಹ ಪಾಲಿಸಿಗಳನ್ನು ಮಾಡಿಕೊಂಡು ಹೋದರೆ ಖಂಡಿತವಾಗಿ ಬಹಳ ಕಷ್ಟವಾಗುತ್ತದೆ. ಇಂಡಸ್ಟ್ರೀಯಲಿಸ್ಟ್ಗಳು ಅರ್ಜಿಗಳನ್ನು ಒಪ್ಪಿಸಿದ ಒಂದು ತಿಂಗಳು ಅಥವಾ ಎರಡು ತಿಂಗಳೊಳಗೆ ಅವರಿಗೆ ದಯವಿಟ್ಟು ಸಂಪೂರ್ಣ ನೀರಿನ ವ್ಯವಸ್ಥೆ, ವಿದ್ಯುತ್ಚಕ್ತಿ, ಫೈನಾನ್ಷಿಯಲ್ ಅರೇಂಜ್ಮೆಂಟ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಬಸವರಾಜ (ಬ್ರಹ್ಮಾವರ್) : ಸನ್ಮಾನ್ಯ ಅಧ್ಯಕ್ಷರೇ, ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕೋಸ್ಕರ ಹಾಗೂ ಜನರಿಗೆ ಉತ್ತೇಜನ ನೀಡಲು ಈ ಸಹಾಯಧನ ಕೊಡುವ ಒಂದು ನೀತಿಯನ್ನು ಸರ್ಕಾರ ಪ್ರಕಟಣೆ ಮಾಡಿದೆ. ಆ ದಿಸೆಯಲ್ಲಿ ಕೈಗಾರಿಕೋದ್ಯಮಿಗಳು ಮುಂದೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ಈ ರೀತಿ ಸ್ಥಾಪನೆ ಮಾಡಿದವರಿಗೆ ಕಳೆದ ಮೂರು ವರ್ಷಗಳಿಂದ ಸರಿಯಾಗಿ ಸಬ್ಸಿಡಿ ಸಿಗದೇ ಇರತಕ್ಕದ್ದನ್ನು ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. 1993-94ರಲ್ಲಿ 30 ಕೋಟಿ ರೂಪಾಯಿಗಳನ್ನು ಅದಕ್ಕೆ ನಿಗದಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ಯಾವಾಗ ಬಿಡುಗಡೆ ಮಾಡುತ್ತಾರೆ ಎಂಬುದನ್ನು ಹೇಳಲಿಲ್ಲ. ಉದಾಹರಣೆಗೆ, ನನ್ನ ಕ್ಷೇತ್ರದಲ್ಲಿ ಅಂದರೆ ಬ್ರಹ್ಮಾವರದಲ್ಲಿ ಹೊಸೂರು ಖಾರ್ಜಿನಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿ (ಕೃಷ್ಣಾ ರೈಸ್ ಮಿಲ್) ಅವರಿಗೆ ಈ ವರೆಗೆ ಸಬ್ಸಿಡಿ ಸಿಕ್ಕಿಲ್ಲ. ಆದ್ದರಿಂದ ಅವರಿಗೆ ಆದಷ್ಟು ಬೇಗ ಸಬ್ಸಿಡಿ ಸಿಗುವಂತೆ ಕ್ರಮ ಕೈಗೊಳ್ಳಬೇಕು. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಥವಾ ಬ್ರಹ್ಮಾವರದಲ್ಲಿ ಕೂಡ ಸಣ್ಣ ಕೈಗಾರಿಕಾ ಷೆಡ್‌ಗಳನ್ನು ಸ್ಥಾಪನೆ ಮಾಡಬೇಕು. ಅಲ್ಲಿ ಬೇಕಾದಷ್ಟು ಸ್ಥಳ ಇದೆ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : 1990-91ರಲ್ಲಿ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಈ ಸಬ್ಸಿಡಿಗೆ ತೆಗೆದು ಇಡಲಾಗಿತ್ತು. ಆದರೆ 1992-93ರಲ್ಲಿ 15 ಕೋಟಿ ರೂಪಾಯಿಗಳನ್ನು ತೆಗೆದು ಇಡಲಾಗಿತ್ತು. 1993-94ರಲ್ಲಿ 30 ಕೋಟಿ ರೂಪಾಯಿ ಸಬ್ಸಿಡಿಗೋಸ್ಕರ ಸರ್ಕಾರ ಹಣ ತೆಗೆದು ಇಟ್ಟಿದೆ. 30 ಕೋಟಿ ರೂಪಾಯಿಗಳನ್ನು ನಾವು ಈ ವರ್ಷ ಬಿಡುಗಡೆ ಮಾಡಿರುವುದರಿಂದ ಸಾಧಾರಣವಾಗಿ ಎಲ್ಲ ಬ್ಯಾಕ್‌ಲಾಗ್ ಕ್ಲಿಯರ್ ಆಗಲಿಕ್ಕೆ ಸಾಧ್ಯತೆ ಇದೆ ಎಂದು ನಾನು ಹೇಳಲಿಷ್ಟಪಡುತ್ತೇನೆ. ಈಗ ನಾವು ಈ ಸಬ್ಸಿಡಿ ರಿಲೀಸ್ ಮಾಡುವಾಗ ಸಹ ಸ್ವಲ್ಪ ಆದ್ಯತೆ ಕೊಡುತ್ತೇವೆ. ಇಂಡಸ್ಟ್ರೀಸ್‌ನಲ್ಲಿ ಯಾವ ಜಿಲ್ಲೆಗಳು ಬ್ಯಾಕ್ವರ್ಡ್ ಇವೆ ಮುಖ್ಯವಾಗಿ ಕಾರವಾರ, ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಈ ಜಿಲ್ಲೆಗಳಿಗೆ ಸ್ವಲ್ಪ ಹೆಚ್ಚಿನ ಅವಕಾಶವನ್ನು ಕೊಟ್ಟು ನಾವು ಹೆಚ್ಚು ಬಿಡುಗಡೆ ಮಾಡುತ್ತೇವೆ. ಈ ವರ್ಷ ನಮಗೆ ಮೂವತ್ತು ಕೋಟಿ ರೂಪಾಯಿಗಳು ಸಿಗುವುದರಿಂದ ಮಂಗಳೂರು ಜಿಲ್ಲೆಗೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಲಿಕ್ಕೆ ಸಾಧ್ಯತೆ ಇದೆ. ಅಂಕಿ ಅಂಶಗಳ ಪ್ರಕಾರ 30ನೇ ಸೆಪ್ಟೆಂಬರ್ 1992ರ ತನಕ ಅಂದರೆ ಕಟ್ ಆಫ್ ರೇಟ್ ತನಕ ಯಾರ್ಯಾರಿಗೆ ಸಬ್ಸಿಡಿ ಸ್ಯಾಂಕ್ಷನ್ ಆಗಿತ್ತು ಅವರಿಗೆ ಇದರಲ್ಲಿ ಬಿಡುಗಡೆ ಮಾಡುತ್ತೇವೆ. ಈಗ ಉಳಿದಿರತಕ್ಕ 288 ಯೂನಿಟ್‌ಗಳಿಗೆ 277-87 ಲಕ್ಷ ಅಂದರೆ ಸುಮಾರು ಎರಡು ಮುಕ್ಕಾಲು ಕೋಟಿ ರೂಪಾಯಿಗಳು ಬಾಕಿ ಇದೆ ಎಂದು ಹೇಳಬಹುದು. ಈ ವರ್ಷ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಒಂದು ಲಕ್ಷಕ್ಕಿಂತ ಕೆಳಗೆ ಇರತಕ್ಕ ಸಬ್ಸಿಡಿ ಅಂದರೆ ಟೈನಿ ಮತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನವರು ಏನು ಇದ್ದಾರೆ, ಅವರಿಗೆ ಪ್ರಯಾರಿಟಿ ಮೇಲೆ ಯಾವಾಗ ಸ್ಯಾಂಕ್ಷನ್ ಆಗುತ್ತದೆ, ಸ್ಯಾಂಕ್ಷನ್ ಆದ ವರ್ಷದಲ್ಲೇ ಅವರಿಗೆ ಬಿಡುಗಡೆ ಮಾಡಬೇಕು ಎನ್ನತಕ್ಕ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಈ ವರ್ಷದ ಸಬ್ಸಿಡಿ ಅಮೌಂಟ್‌ನ್ನು ಇದೇ ವರ್ಷದಲ್ಲಿ ಅದರಲ್ಲೂ ಸಣ್ಣ ಕೈಗಾರಿಕೆಗಳು ಮತ್ತು ಟೈನಿ ಕೈಗಾರಿಕೆಗಳಿಂದು ನಾವು ಏನು ಮಾಡುತ್ತೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 150 ಕೈಗಾರಿಕೆಗಳಿಗೆ ಹಣ ಕೊಡಬೇಕಾದುದು ಬಾಕಿ ಇದೆ. 1988-89-90-91ರಲ್ಲಿ 45 ಅಂದರೆ ಒಟ್ಟು 275 ಕೈಗಾರಿಕೆಗಳಿಗೆ ಬಾಕಿ ಇದೆ. ಇದಕ್ಕಾಗಿ ಸುಮಾರು 255ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಬೇಕಾಗಿದೆ. ಈ ಹಣ ಇನ್ನೂ ಬಿಡುಗಡೆ ಆಗಿಲ್ಲ. ಯಾವಾಗ ಬಿಡುಗಡೆ

ಮಾಡುತ್ತೀರಿ? ಎಂಬುದನ್ನು ತಾವು ತಿಳಿಸಬೇಕು. ನನಗೆ ಬಂದ ಮಾಹಿತಿ ಪ್ರಕಾರ 88 ರಿಂದ ಅವರಿಗೆ ಬರುವುದನ್ನು ಅದಷ್ಟು ಬೇಗ ಬಿಡುಗಡೆ ಮಾಡಬೇಕು. ಕೆ.ಎಸ್.ಎಫ್.ಸಿ. ಕೆ.ಐ.ಎ.ಡಿ.ಬಿ. ಮತ್ತು ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್‌ಗೆ ಹೊಂದಾಣಿಕೆ ಉಂಟು ಮಾಡಲು ಸಿಂಗಲ್ ವಿಂಡೋ ಪಾಲಿಸಿಯನ್ನು ಮಾಡಬೇಕು. ಗುಜರಾತ್‌ನಲ್ಲಿ ಇದೇ ರೀತಿ ಮಾಡಿ ಬಹಳಷ್ಟು ಅಭಿವೃದ್ಧಿ ಹೊಂದಿದೆ. ಕರ್ನಾಟಕದಲ್ಲೂ ಕೂಡ ಇದನ್ನು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ : ಮಾನ್ಯ ಸದಸ್ಯರು ಏನು ವಿಷಯವನ್ನು ಹೇಳಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಈ ವರ್ಷ ಹೆಚ್ಚು ಸಬ್ಸಿಡಿಯನ್ನು ಮಂಗಳೂರು ಜಿಲ್ಲೆಗೆ ಬಿಡುಗಡೆ ಮಾಡಲಾಗುವುದು.

ಅಧ್ಯಕ್ಷರು : ಶ್ರೀ ಶಿವಮೂರ್ತಿಯವರೇ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ಸಮಯದ ಅಭಾವದಿಂದ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಸಚಿವರು ತಯಾರಾಗಿ ಬಂದಿದ್ದಾರೆ.

ಅಧ್ಯಕ್ಷರು : ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ; ಕಾಲದ ಅಭಾವದಿಂದ ನಾಳೆ ತೆಗೆದುಕೊಳ್ಳೋಣ.

ಶ್ರೀ ಕೆ. ಶಿವಮೂರ್ತಿ : ಆಯಿತು.

ಶಾಸನ ರಚನಾ ಕಾರ್ಯಕಲಾಪಗಳು

1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯಿತಿ ಸಮಿತಿಗಳ ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ನಾನು ಕರ್ನಾಟಕ ಜಿಲ್ಲಾಪರಿಷತ್ತುಗಳ ತಾಲ್ಲೂಕು ಪಂಚಾಯಿತಿ ಸಮಿತಿಗಳ, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕ, 1993 ಅನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : 1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ವೈ. ಘೋರ್ಪಡೆ(ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ (ಅನುಬಂಧ I).

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ). ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

* ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಪಂಚಾಯತ್‌ರಾಜ್ ವಿಧೇಯಕದ ಅನುಷ್ಠಾನ ಕರ್ನಾಟಕದಲ್ಲಿ ಅತೀ ಮುಖ್ಯವಾದಂಥ ಹೆಜ್ಜೆ. ಮತ್ತೆ ಈ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆದ ನಂತರ ಇಂಥ ಸಮಗ್ರವಾದಂಥ ತಿದ್ದುಪಡಿಯನ್ನು ಮೊದಲನೇ ಬಾರಿ ಈ ರಾಜ್ಯಮಟ್ಟದಲ್ಲಿ ನಾವು ತರುತ್ತಿದ್ದೇವೆ. ಆದ ಕಾರಣ, ಇಡೀ ರಾಷ್ಟ್ರ ಈ ನಮ್ಮ ಮಸೂದೆ ಕಡೆ ನೋಡುತ್ತಿದೆ. ಕೇಂದ್ರದ ಸಚಿವರು ಏನು ಕರ್ನಾಟಕಕ್ಕೆ ಭೇಟಿ ಕೊಟ್ಟರು, ಅವರು ಇದು ಇಡೀ ರಾಷ್ಟ್ರಕ್ಕೆ ಒಂದು ಮಾದರಿ ವಿಧೇಯಕವಾಗುತ್ತದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಆದಕಾರಣ ಈ ವಿಧೇಯಕದಲ್ಲಿ ನಾವು ಸಂಪೂರ್ಣವಾದಂಥ ವಿಕೇಂದ್ರೀಕರಣಗೊಳಿಸಿ, ಎಷ್ಟು ಅಧಿಕಾರ ಜನರಿಗೆ ಕೊಡುವುದಕ್ಕೆ ಸಾಧ್ಯ, ಆ ಪ್ರಯತ್ನವನ್ನು ನಾವು ಮಾಡಿದ್ದೇವೆ. ಮತ್ತೆ ಇದು ಇಡೀ ಕರ್ನಾಟಕಕ್ಕೆ ಒಂದು ಹೆಮ್ಮೆಯ, ಐತಿಹಾಸಿಕವಾದಂಥ ವಿಧೇಯಕವಾಗಲಿ ಎಂದು ನಮ್ಮೆಲ್ಲರ ಪ್ರಯತ್ನ. ನಾವು ಪ್ರಾಮಾಣಿಕತೆಯಿಂದ ಇದರ ಬಗ್ಗೆ ಆಳವಾಗಿ ಚರ್ಚೆ ನಡೆಸಿ ಏನಾದರೂ ನಾವು ಒಮ್ಮತದಿಂದ ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಸಾಧ್ಯವಾದರೆ ಇದರ ಒಂದು ಮಹತ್ವ ಇನ್ನಷ್ಟು ಜಾಸ್ತಿಯಾಗುತ್ತದೆ ಮತ್ತು ಕರ್ನಾಟಕದಲ್ಲಿ ಮಾಡಿದ ಪ್ರಯತ್ನ ಏನು ಇದೆ, ಇದು ಇಡೀ ರಾಷ್ಟ್ರಕ್ಕೆ ಒಂದು ಮಾದರಿಯಾಗುವುದರಲ್ಲಿ ಸಹಾಯವಾಗುತ್ತದೆ ಎಂಬ ಮಾತನ್ನು ಹೇಳಿ ಈ ಮಸೂದೆಯಲ್ಲಿರತಕ್ಕಂಥ ಮುಖ್ಯ ಅಂಶಗಳನ್ನು ನಾನು ಸಂಕ್ಷಿಪ್ತವಾಗಿ ಈ ಸದನದ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನಂತರ ಇದರ ಬಗ್ಗೆ ಚರ್ಚೆ ಮಾಡೋಣ. ಇದರಲ್ಲಿ ಏನಾದರೂ ರಚನಾತ್ಮಕವಾದಂಥ ಸಲಹೆಗಳು ನಿಮ್ಮ ಕಡೆಯಿಂದ ಬಂದರೆ ಅದನ್ನು ಸ್ವೀಕಾರ ಮಾಡುವುದರಲ್ಲಿ ನಾವು ಯಾವ ಒಂದು ಪ್ರಿಸ್ಟಿಜ್ ಪ್ರಶ್ನೆ ತರುವುದಿಲ್ಲ. ಈಗ ಈ ಹೊಸ ಆಕ್ಟ್‌ಗೆ ಕರ್ನಾಟಕ ಪಂಚಾಯತ್ ರಾಜ್ ಆಕ್ಟ್-1993 ಎಂದು ಕರೆದಿದ್ದೇವೆ. ಮತ್ತೆ ಈ ಮೂರು ಹಂತದಲ್ಲಿ ಚುನಾಯಿತ ಸಂಸ್ಥೆಗಳನ್ನು ಸ್ಥಾಪನೆ ಮಾಡುವಂಥ ನಿರ್ಧಾರ ಇದರಲ್ಲಿದೆ. ಇದು ಸಂಪೂರ್ಣವಾಗಿ 73ನೇ ಸಂವಿಧಾನದ ತಿದ್ದುಪಡಿಗೆ ಅನುಗುಣವಾಗಿ ಇದೆ. ಇಲ್ಲಿ ಹೆಸರುಗಳನ್ನು ಸ್ವಲ್ಪಮಟ್ಟಿಗೆ ನಾವು